## ನೆಟ್‌ಫ್ಲಿಕ್ಸ್

ಐಫೋನ್‌ನ ಈ ಆ್ಯಪ್‌ನಿಂದ ಚಂದಾದಾರರು ಟಿವಿ ಹಾಗೂ ಚಲನಚಿತ್ರಗಳನ್ನು ಎಲ್ಲಾ ಕಡೆ ವೀಕ್ಷಿಸಬಹುದು. ಜೊತೆಗೆ ವಿಡಿಯೋಗಳನ್ನು ಕೂಡಾ ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸಬಹುದು. ಈ ಹಿಂದೆಯೇ ಈ ಆ್ಯಪ್ ಬಂದಿದ್ದರೂ ಈಗ ವೈಫೈ ಸಂಕೇತಗಳ ಸಂಪರ್ಕ ಹಾಗೂ ಸ್ಟ್ರೀಮಿಂಗ್ ಗುಣಮಟ್ಟವನ್ನು ಸುಧಾರಿಸಲಾಗಿದೆ. ಆ್ಯಪ್‌ಸ್ಟೋರ್‌ನಿಂದ ಇದನ್ನು ಡೌನ್‌ಲೋಡ್ ಮಾಡಿಕೊಂಡು ನಿಮ್ಮ ನೆಟ್‌ಫ್ಲಿಕ್ಸ್ ಖಾತೆಯ ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್ ಹಾಕಿ. ಮುಖ್ಯ ಪಟ್ಟಿಯಲ್ಲಿ ನಿಮ್ಮ ನೆಚ್ಚಿನ ಸಿನಿಮಾಗಳ ಹೆಸರುಗಳಿರುತ್ತವೆ. ನೀವು ಈ ಹಿಂದೆ ಲೈಕ್ ಮಾಡಿದ ಅಥವಾ ಬ್ರೌಸ್ ಮಾಡಿದ ಅಂಕಿ– ಅಂಶಗಳ ಆಧಾರದ ಮೇಲೆ ಈ ಹೆಸರುಗಳನ್ನು ಶಿಫಾರಸ್ಸು ಮಾಡಲಾಗುತ್ತದೆ. ನೀವು ಚಿತ್ರ ವೀಕ್ಷಿಸುತ್ತಿರುವಾಗಲೇ ಹಲವು ಕಾರ್ಯಕ್ರಮಗಳನ್ನು ಒಳಗೊಂಡ ಪಟ್ಟಿ ಡಿಸ್‌ಪ್ಲೇ ಆಗುತ್ತದೆ.






## ವಿಮೇಲ್

ನಿಮ್ಮ ಇಮೇಲ್ ಇನ್‌ಬಾಕ್ಸ್ ನಿರ್ವಹಣೆ ಮಾಡುವ ಈ ಉಚಿತ ಆ್ಯಂಡ್ರಾಯ್ಡ್ ಆ್ಯಪ್ ನಿಮ್ಮದೇ ದನಿಯಲ್ಲಿ ಇಮೇಲ್‌ಗೆ ಉತ್ತರಿಸುವಂತೆ ಮಾಡುತ್ತದೆ. ಇದು ಅತ್ಯಂತ ಬಳಕೆದಾರರ ಸ್ನೇಹಿಯಾಗಿದ್ದು, ಗೂಗ್ಲ್, ಔಟ್‌ಲುಕ್, ಯಾಹೂ ಹಾಗೂ ಎಒಎಲ್ ಇಮೇಲ್‌ಗಳನ್ನು ಸಪೋರ್ಟ್ ಮಾಡುತ್ತದೆ. ಎಲ್ಲಾ ಇಮೇಲ್‌ಗಳನ್ನು ಗ್ರೂಪ್ ಮಾಡುತ್ತದೆ. ಅಲ್ಲಿಂದ ನೀವು ಬಾಣದ ಗುರುತಿನ ಮೇಲೆ ಕುಟ್ಟಿ ಸಂದೇಶಗಳನ್ನು ವಿಸ್ತಾರವಾಗಿ ನೋಡಬಹುದು. ನಿಮಗೆ ಬೇಡದ ಮೇಲ್‌ಗಳನ್ನು ಒಂದೇ ಸಾರಿ ಆಯ್ಕೆ ಮಾಡಿ ಅಳಿಸಿ ಹಾಕಬಹುದು. ಇದು ಸೋಶಿಯಲ್ ಅಪ್‌ಡೇಟ್‌ಗಳನ್ನು ಹಾಗೂ ಜಾಹೀರಾತು ಮೇಲ್‌ಗಳನ್ನು ಪ್ರತ್ಯೇಕಿಸುತ್ತದೆ. ಅವು ಇನ್‌ಬಾಕ್ಸ್‌ನಿಂದ ಮಾಯವಾಗಿ ಇನ್ನೊಂದು ಫೋಲ್ಡರ್‌ಗೆ ಸೇರುತ್ತವೆ.

## ಟ್ರಸ್ಟೆಡ್ ಕಾಂಟ್ಯಾಕ್ಟ್ಸ್

ಗೂಗ್ಲ್‌ನ ಈ ಹೊಸ ಆ್ಯಪ್ ನಿಮ್ಮ ರಕ್ಷಣೆಗೆ ನಿಲ್ಲುವಂತಹ ಆ್ಯಪ್ ಆಗಿದ್ದು, ನೈಸರ್ಗಿಕ ವಿಕೋಪದಂತಹ ಪರಿಸ್ಥಿತಿಯ ಬಗ್ಗೆ ಮುನ್ನೆಚ್ಚರಿಕೆ ನೀಡುತ್ತದೆ. ಒಂಟಿಯಾಗಿ ರಾತ್ರಿ ಅಪರಿಚಿತ ಜಾಗದಲ್ಲಿ ತೆರಳುವಾಗ ನೆರವಿಗೆ ಧಾವಿಸುತ್ತದೆ. ಇದು ಗೂಗ್ಲ್‌ನ ಆ್ಯಂಡ್ರಾಯ್ಡ್ ಮೊಬೈಲ್ ಸಾಫ್ಟ್‌ವೇರ್ ಇರುವ ಸಾಧನಗಳಿಗೆ ಮಾತ್ರ ಲಭ್ಯ. ನಿಮ್ಮ ಫೋನಿನ ಜಿಪಿಎಸ್ ವ್ಯವಸ್ಥೆಯನ್ನು ಆಧರಿಸಿ ಇದು ಕೆಲಸ ಮಾಡುತ್ತದೆ. ಉದಾಹರಣೆಗೆ ಮೊಬೈಲ್ ಸಿಗ್ನಲ್ ಅತ್ಯಂತ ದುರ್ಬಲವಾಗಿದ್ದಾಗ ಅಥವಾ ಬ್ಯಾಟರಿ ಕೈಕೊಟ್ಟಾಗ ನಿಮಗೆ ಆಪ್ತರಾದವರು ಇಂತಹ ಸಮಸ್ಯೆಗಳನ್ನು ಪತ್ತೆ ಮಾಡಬಹುದು. ಅಂದರೆ ಕುಟುಂಬದ ಸದಸ್ಯರು ಅಥವಾ ಆಪ್ತ ಸ್ನೇಹಿತರನ್ನು ಟ್ರಸ್ಟೆಡ್ ಪಟ್ಟಿಗೆ ಸೇರಿಸಬಹುದು. ಅವರು ಈ ಆ್ಯಪ್ ತೆರೆದಾಗ ನಿಮ್ಮ ಫೋನ್ ಚಟುವಟಿಕೆ ಅವರಿಗೆ ಗೊತ್ತಾಗುತ್ತದೆ. ನೀವು ಆಫ್‌ಲೈನ್ ಆದಾಗ ಅವರ ಫೋನಿನಲ್ಲಿ ಸೂಚನೆ ಸಿಗುತ್ತದೆ. ಅವರು ನಿಮಗೆ ಉತ್ತರಿಸುವಂತೆ ಕೇಳಬಹುದು. ಉತ್ತರ ಬಾರದಿದ್ದಾಗ ಐದೇ ನಿಮಿಷದಲ್ಲಿ ನೀವಿರುವ ಸ್ಥಳದ ವಿವರ ಅವರಿಗೆ ಸಿಗುತ್ತದೆ.






## ಐಹಾರ್ಟ್‌ರೇಡಿಯೊ

ಆ್ಯಂಡ್ರಾಯ್ಡ್‌ನ ಈ ಆ್ಯಪ್‌ನಲ್ಲಿ ಸಾವಿರಾರು ರೇಡಿಯೊ ಕೇಂದ್ರಗಳು ಲಭ್ಯ. ಕೆಲವು ಚಾನೆಲ್‌ಗಳನ್ನು ನಿಮಗೆ ಬೇಕಾದಂತೆ ವಿಭಾಗಿಸಿಕೊಳ್ಳಬಹುದು. ಫೇಸ್‌ಬುಕ್ ಅಥವಾ ಗೂಗ್ಲ್ ಯೂಸರ್‌ನೇಮ್ ಮತ್ತು ಪಾಸ್‌ವರ್ಡ್ ಬಳಸಿ ಲಾಗಿನ್ ಆಗಬಹುದು. ನಂತರ ನಿಮಗೆ ಇಷ್ಟವಾಗುವ ಸಂಗೀತದ ಚಾನೆಲ್‌ಗಳ ಪಟ್ಟಿಯನ್ನು ನೋಡಿ ಆಯ್ಕೆ ಮಾಡಬಹುದು. ನಿಮಗೆ ಬೇಕಾದಂತೆ ಚಾನೆಲ್ ಅನ್ನು ರೂಪಿಸಿಕೊಳ್ಳಬಹುದು. ಅಂದರೆ ನಿಮಗೆ ಇಷ್ಟವಾಗುವ ಹಾಡು, ಕಲಾವಿದರ ಪಟ್ಟಿಯನ್ನು ಆಯ್ಕೆ ಮಾಡಿದರೆ ಆ್ಯಪ್ ಮತ್ತೆ ಅಂಥವುಗಳನ್ನೇ ಶಿಫಾರಸ್ಸು ಮಾಡಿ ಡಿಸ್‌ಪ್ಲೇ ಮಾಡುತ್ತದೆ.

■ ಎಸ್. ತುಂಬೆ